# **1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

## <u>ಸತ್ರ ಮೊಕದ್ದಮೆ ನಂಃ **54/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಪಾರ್ಥಿಬನ್ | ಪಿಡಬ್ಲೂ - 11 |
| ತಂದೆಯ ಹೆಸರು | - ಕಣ್ಣನ್ | ಸಿಡಬ್ಲೂ - 17 |
| ವಯಸ್ಸು | - 35 ವರ್ಷ | |
| ಉದ್ಯೋಗ | - ಗುಜರಿ ವ್ಯಾಪಾರ | |
| ವಾಸ ಸ್ಥಳ | - 2 ನೇ ಕ್ರಾಸ್, ಶಂಕರಪುರ, ಚಿಕ್ಕಮಗಳೂರು | |

ದಿನಾಂಕಃ 25.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಫ್ರಾಸಾ.1 ಗೊತ್ತು. ಮೃತ ಶಾರದ ಗೊತ್ತು. ಈ ದಿನ ವಿಡಿಯೋ ಕಾನ್ಪರೇನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ಮೃತ ಶಾರದಳ ಗಂಡ. ಅವರೆಲ್ಲರೂ

ನಮ್ಮ ಏರಿಯಾದ ವಾಸಿಗಳು. ಸಹ ಪಂಚರಾದ ಚಾಸಾ.18 ಗೊತ್ತು.

2. ಆರೋಪಿ ತನ್ನ ಹೆಂಡತಿ ಶಾರದಳಿಗೆ ಹೊಡೆದು ಸಾಯಿಸಿದ್ದ ಬಗ್ಗೆ ದಿಃ 23-01-2025 ರಂದು ಮಹಜರ್ ಜರುಗಿಸಲು ಸಹಕರಿಸಬೇಕೆಂದು ನನಗೆ ಮತ್ತು ಚಾಸಾ.18 ರವರಿಗೆ ಚಿಕ್ಕಮಗಳೂರು ಮಹಿಳಾ ಪೊಲೀಸರು ನೋಟೀಸನ್ನು ಕೊಟ್ಟಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.18 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು.

3. ಅದರಂತೆ ಅದೇ ದಿನ ನಾನು ಮತ್ತು ಚಾಸಾ.18 ರವರು ಶಂಕರಪುರದ 2 ನೇ ಅಡ್ಡ ರಸ್ತೆಯಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಮುಂದೆ ಆರೋಪಿ ತನ್ನ ಹೆಂಡತಿ ಶಾರದ ಮತ್ತು ಫ್ರಾಸಾ.1 ರವರೊಂದಿಗೆ ವಾಸವಾಗಿದ್ದ ಮನೆಯ ಹತ್ತಿರ ಹೋದೆವು. ಅಲ್ಲಿಗೆ ಪೊಲೀಸರು ಬಂದಿದ್ದರು. ನಮ್ಮ ಸಮಕ್ಷಮ ಫ್ರಾಸಾ.1 ರವರು ಅಲ್ಲಿ ಆರೋಪಿ ಶಾರದಳಿಗೆ ಹೊಡೆದ ಸ್ಥಳ ಅದೇ ಎಂದು ಪೊಲೀಸರಿಗೆ ತೋರಿಸಿದರು. ಅಲ್ಲಿ ಪೊಲೀಸರು ಮಹಜರನ್ನು ಬರೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ಈಗಾಗಲೇ ನಿಪಿ.2 ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

4. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಮೇಲೆ ಹೇಳಿದಂತೆ ಪೊಲೀಸರು ಮಹಜರ್ ಜರುಗಿಸುವ ಸಮಯದಲ್ಲಿ ತೆಗೆದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ. ಅವುಗಳಲ್ಲಿ ನನ್ನೊಂದಿಗೆ ಪ್ರಾಸಾ.5, ಪ್ರಾಸಾ.1, ಚಾಸಾ.18 ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್. ವಕೀಲರಿಂದಃ –</u>

5. ನಾನು ಕಳೆದ 20 ವರ್ಷಗಳಿಂದ ಚಿಕ್ಕಮಗಳೂರಿನ ಶಂಕರಪುರದಲ್ಲಿ ವಾಸವಾಗಿದ್ದೇನೆ. ನಾನು ಸದರಿ ಶಂಕರಪುರದಲ್ಲಿ ಗುಜರಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಅಂಗಡಿಯ ಪಕ್ಕದಲ್ಲಿಯೇ ಪ್ರಾಸಾ.1 ರವರು ವಾಸವಾಗಿದ್ದಾರೆ. ಆರೋಪಿ ಶಾರದಳಿಗೆ ಹೊಡೆದು ಸಾಯಿಸಿದ್ದ ಬಗ್ಗೆ ಮಹಜರ್ ಜರುಗಿಸಲು ಪೊಲೀಸರು ನನ್ನನ್ನು ಕರೆಸಿದ್ದರು. ಮನೆಯಲ್ಲಿಯೇ ಶಾರದಳನ್ನು ಸಾಯಿಸಲಾಗಿತ್ತೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಶಾರದ ಸತ್ತಿದ್ದ ಜಾಗವನ್ನು ಯಾರು ತೋರಿಸಿದರು ಎಂದರೆ ಸಾಕ್ಷಿ ಆರೋಪಿ ಶಾರದಳಿಗೆ

ಹೊಡೆದಿದ್ದು ಅವರ ಮನೆಯಲ್ಲೇ, ಆದರೆ ಆಕೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಳು ಎನ್ನುತ್ತಾರೆ. ಆರೋಪಿ ಶಾರದಳಿಗೆ ಹಲ್ಲೆ ಮಾಡಿದ್ದನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

6. ಫ್ರಾಸಾ.1 ರವರ ಮನೆಯ ಬಲಭಾಗಕ್ಕೆ ಸಂತುರವರ ಮನೆ ಇದೆ, ಎಡಭಾಗಕ್ಕೆ ರಾಮಣ್ಣರವರ ಮನೆ ಇದೆ, ಮುಂದೆ ಚಾಮುಂಡೇಶ್ವರಿ ದೇವಸ್ಥಾನವಿದೆ ಮತ್ತು ಹಿಂದೆ ಮನೆ ಇದೆ. ಫ್ರಾಸಾ.1 ರವರ ಮನೆಯ ವಿಸ್ತೀರ್ಣವನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ತುಂಬಾ ಚಿಕ್ಕ ಮನೆ ಎನ್ನುತ್ತಾರೆ.

7. ಆರೋಪಿಯನ್ನು ನಾನು ಈ ಹಿಂದೆ ನೋಡಿದ್ದೇನೆ. ಪೊಲೀಸರ ಮಾತನ್ನು ಕೇಳಿ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಶಾರದಳ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಪೊಲೀಸರು ತೆಗೆದಿದ್ದಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳಕ್ಕೆ ಬನ್ನಿ ಎಂದು ಕರೆಸಿ ಫೋಟೋಗಳನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಯಾವ ವಿಷಯಕ್ಕೆ ಸದರಿ ಫೋಟೋಗಳನ್ನು ತೆಗೆದುಕೊಳ್ಳಲಾಗಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿತ್ತು ಎನ್ನುತ್ತಾರೆ.

8. ದಿಃ 23-01-2025 ರಂದು ಪೊಲೀಸರು ಮಹಜರ್ ಜರುಗಿಸಿದ್ದಾರೆ. ಸ್ಥಳದಲ್ಲಿಯೇ ನಾನು ಮಹಜರಿಗೆ ಸಹಿ

ಮಾಡಿದ್ದೇನೆ. ನೀವು ಹೇಳಿದಂತೆ ಸ್ಥಳದಲ್ಲಿ ಸಹಿ ಮಾಡಿಲ್ಲ, ಬದಲಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ